2019 ಕ.ತೀ.ವ 743

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ ಬೈರಾರೆಡ್ಡಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀಮತಿ ಮಹಿಬೂಬಿ –ವಿರುದ್ಧ–
ಗೋವಿಂದ್ ಎಮ್. ಹರಿಪಲ್ಲೆ ಹಾಗೂ ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 96ನೇ ಪ್ರಕರಣದ ಮೇರೆಗಿನ ನಿಯತ ಮೊದಲ ಅಪೀಲು.

ಈ ಅಪೀಲನ್ನು, ಬೀಳಗಿಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ, ಮೂಲದಾವೆ 10/2010ರ ಸಂಖ್ಯೆಯನ್ನು ಹೊಂದಿರುವ ದಾವೆಯಲ್ಲಿ 5ನೇ ಸಂಖ್ಯೆಯ ಪ್ರತಿವಾದಿಯು ಹೂಡಿದ್ದಾರೆ. 1 ರಿಂದ 5ರ ವರೆಗಿನ ಎದುರುದಾರರು ಇಲ್ಲಿ ವಾದಿಗಳಾಗಿದ್ದಾರೆ ಮತ್ತು 6 ರಿಂದ 9ರ ವರೆಗಿನ ಎದುರುದಾರರು 1 ರಿಂದ 4ರ ವರೆಗಿನ ಪ್ರತ್ಯರ್ಜಿದಾರರ ಅವಲಂಬಿತರಾಗಿದ್ದಾರೆ ಹಾಗೂ ಪ್ರಸ್ತುತ ಅಪೀಲುದಾರರು 5ನೇ ಸಂಖ್ಯೆಯ ಪ್ರತಿವಾದಿಯಾಗಿದ್ದಾರೆ. ದಾವೆಯು ಪಾಲು ಮಾಡುವುದಕ್ಕೆ ಸಂಬಂಧಿಸಿದುದಾಗಿದ್ದು, ಆ ಮೂಲಕ ವಾದಿಗಳು ಬೀಳಗಿ ಪಟ್ಟಣದ 1 ಎಕರೆ 20 ಗುಂಟೆಗಳ ಅಳತೆಯಿರುವ 403/1ಎ ಸರ್ವೆ ಸಂಖ್ಯೆ ಹೊಂದಿರುವ ದಾವಾ ಜಮೀನಿನಲ್ಲಿ 5/7ರಷ್ಟು ಭಾಗಕ್ಕೆ ಕ್ಲೇಮು ಮಾಡಿದ್ದಾರೆ.

ಪೂರ್ವ ನ್ಯಾಯನಿರ್ಣಯದ ಪ್ರತಿಷೇಧವನ್ನು ಅನ್ವಯಿಸುವ ಸಲುವಾಗಿ ಪ್ರಸ್ತುತ ವಾದಿಗಳು ಅದೇ ಶೀರ್ಷಿಕೆಯಡಿಯಲ್ಲಿ ಅಥವಾ ಅದೇ ವ್ಯಕ್ತಿಯಡಿಯಲ್ಲಿ ಕ್ಲೇಮು

*ಆರ್.ಎಫ್.ಎ.ಸಂಖ್ಯೆ: 4169/2012, ದಿನಾಂಕ: 9ನೇ ಫೆಬ್ರವರಿ, 2017.

ಮಾಡಲೇಬೇಕಾಗುತ್ತದೆಯೆಂದು ಅಭಿಪ್ರಾಯಪಟ್ಟಿರುವ ಅಧೀನ ನ್ಯಾಯಾಲಯವು, ಮೊದಲಿನ ದಾವೆಯಲ್ಲಿ ವಾದಿಯಾಗಿದ್ದ ಅವರ ಸಹೋದರನ ಮೂಲಕ ವಾದಿಗಳು ಕ್ಲೇಮು ಮಾಡದಿರುವುದರಿಂದ ಇದು ಅವರಿಗೆ ಬದ್ಧವಾಗಿರದೆ, ದೋಷಯುಕ್ತ ಪ್ರಸ್ತಾವವಾಗಿದೆ. ಇಬ್ಬರೂ ವಾದಿಗಳು ಎಂದರೆ ಈ ಮೊದಲಿನ ಹಾಗೂ ಈ ದಾವೆಯಲ್ಲಿರುವ ವಾದಿಗಳು ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರದಲ್ಲಿನ ಅಪ್ರಸ್ತುತ ಆಸ್ತಿಗೆ ಅವರ ಹಕ್ಕಿನ ಸುಳಿವನ್ನು ಶೋಧಿಸುತ್ತಿದ್ದರು.

ಆದುದರಿಂದ, ಸಾಮಾನ್ಯ ವ್ಯಾಜ್ಯ ಕಾರಣವು, ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರವನ್ನು ತಪ್ಪಿಸುವುದಾಗಿದೆ ಹಾಗೂ ಆ ವಿವಾದವು ಅಂತಿಮತೆಯನ್ನು ತಲುಪಿದ್ದು, ಅದನ್ನು ವಾದಿಸಲಾಗುವುದಿಲ್ಲ. ಆದುದರಿಂದ ದಾವೆಯನ್ನು, ಪೂರ್ವ ನ್ಯಾಯನಿರ್ಣಯದ ಮೂಲಕ ನಿಶ್ಚಿತವಾಗಿ ಪ್ರತಿಷೇಧಿಸಲಾಗಿತ್ತು.

ವಿಷಯದ ದೃಷ್ಟಿಕೋನದಲ್ಲಿ, ಅಪೀಲನ್ನು ಪುರಸ್ಕರಿಸಿದ್ದೇವೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕಿರುತ್ತೇವೆ.

ಅಪೀಲನ್ನು ಅಂಗೀಕರಿಸಲಾಗಿದೆ.

**ಅಪೀಲುದಾರರ ಪರ:**

ಶ್ರೀ ಪ್ರಭಾಕರ್ ಎ. ಕುಲಕರ್ಣಿ ಹಾಗೂ ಶ್ರೀ ಗಣೇಶ್ ರಾಯ್ಬಾಗಿ ರವರ ಪರವಾಗಿ ಶ್ರೀ ಎಸ್.ಬಿ. ಹೆಬ್ಬಳ್ಳಿ, ವಕೀಲರು.

**ಪ್ರತ್ಯಪೀಲುದಾರರ ಪರ:**

ಎದುರುದಾರ ಸಂಖ್ಯೆ: 1, 3 ರಿಂದ 6 ಹಾಗೂ 9ಎ ಪರವಾಗಿ ಶ್ರೀ ಬಿ.ಎಂ. ಅಂಗಡಿ ಹಾಗೂ ಶ್ರೀಮತಿ ರತ್ನಮಾಲಾ ಜಿ.ಎಚ್. ವಕೀಲರು.

2ನೇ ಸಂಖ್ಯೆ ಎದುರುದಾರರು ಮೃತರಾಗಿದ್ದಾರೆ.

2ಎ ಯಿಂದ 2ಸಿವರೆಗಿನ ಎದುರುದಾರರು ಅಪ್ರಾಪ್ತರಾಗಿದ್ದು ರೇಣವ್ವ ಭೀಮಸಿ, ಸಣ್ಣಗೌಡರ್ ರವರನ್ನು ಪ್ರತಿನಿಧಿಸಿದ್ದಾರೆ. ನೋಟೀಸು ನೀಡಲಾಗಿದೆ.
6ನೇ ಸಂಖ್ಯೆಯ ಎದುರುದಾರರಿಂದ ಪ್ರತಿನಿಧಿಸಲಾದ 7 ಮತ್ತು 8ನೇ ಸಂಖ್ಯೆಯ ಎದುರುದಾರರು ಅಪ್ರಾಪ್ತರಾಗಿದ್ದಾರೆ.
9ಎ ಸಂಖ್ಯೆಯ ಎದುರುದಾರರಿಂದ ಪ್ರತಿನಿಧಿಸಿದ 9 ಬಿ ಸಂಖ್ಯೆಯ ಎದುರುದಾರರು ಅಪ್ರಾಪ್ತರಾಗಿದ್ದಾರೆ.

## ತೀರ್ಪು

**ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ:**

ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಎಸ್.ಬಿ. ಹೆಬ್ಬಳ್ಳಿ ಹಾಗೂ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಬಿ.ಎಂ. ಅಂಗಡಿಯವರ ವಾದಗಳನ್ನು ಆಲಿಸಲಾಗಿದೆ.

2. ಈ ಅಪೀಲನ್ನು, ಬೀಳಗಿಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ, ಮೂಲದಾವೆ 10/2010ರ ಸಂಖ್ಯೆಯನ್ನು ಹೊಂದಿರುವ ದಾವೆಯಲ್ಲಿ 5ನೇ ಸಂಖ್ಯೆಯ ಪ್ರತಿವಾದಿಯು ಹೂಡಿದ್ದಾರೆ. 1 ರಿಂದ 5ರ ವರೆಗಿನ ಎದುರುದಾರರು ಇಲ್ಲಿ ವಾದಿಗಳಾಗಿದ್ದಾರೆ ಮತ್ತು 6 ರಿಂದ 9ರ ವರೆಗಿನ ಎದುರುದಾರರು 1 ರಿಂದ 4ರ ವರೆಗಿನ ಪ್ರತ್ಯರ್ಜಿದಾರರ ಅವಲಂಬಿತರಾಗಿದ್ದಾರೆ ಹಾಗೂ ಪ್ರಸ್ತುತ ಅಪೀಲುದಾರರು 5ನೇ ಸಂಖ್ಯೆಯ ಪ್ರತಿವಾದಿಯಾಗಿದ್ದಾರೆ. ದಾವೆಯು ಪಾಲು ಮಾಡುವುದಕ್ಕೆ ಸಂಬಂಧಿಸಿದುದಾಗಿದ್ದು, ಆ ಮೂಲಕ ವಾದಿಗಳು ಬೀಳಗಿ ಪಟ್ಟಣದ 1 ಎಕರೆ 20 ಗುಂಟೆಗಳ ಅಳತೆಯಿರುವ 403/1ಎ ಸರ್ವೆ ಸಂಖ್ಯೆ ಹೊಂದಿರುವ ದಾವಾ ಜಮೀನಿನಲ್ಲಿ 5/7ರಷ್ಟು ಭಾಗಕ್ಕೆ ಕ್ಲೇಮು ಮಾಡಿದ್ದಾರೆ.

ಪ್ರಸ್ತುತ ಅಪೀಲುದಾರನ್ನು, ಪ್ರತಿವಾದಿಯು ಸ್ವತ್ತನ್ನು ಖರೀದಿಸಿರುವುದರಿಂದ ಪ್ರತಿವಾದಿಯಾಗಿ ಸೇರಿಸಲಾಗಿದೆ. ಪ್ರಶ್ನಿತ ಸ್ವತ್ತು ಎಲ್ಲಾ ಎದುರುದಾರರ ಪೂರ್ವಜರ

ಸ್ವತ್ತಾಗಿದ್ದು, ಇದು ವಾದಿಗಳ ಅಜ್ಜನಾಗಿದ್ದ ಸಿದ್ದಪ್ಪ ಎಂಬೊಬ್ಬರಿಗೆ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ ಉಪಬಂಧಗಳ ಅಡಿಯಲ್ಲಿ ಮಂಜೂರು ಮಾಡಲಾದ ಜಮೀನು ಇದಾಗಿತ್ತೆಂದು ತದನುಸಾರವಾಗಿ ಅವರು ಸ್ವತ್ತಿನ ಜಂಟಿ ಸ್ವಾಧೀನತೆ ಹಾಗೂ ಅನುಭೋಗದಲ್ಲಿರುವುದಾಗಿ ವಾದಿಗಳು ಕ್ಲೇಮು ಮಾಡಿದ್ದರು. ವಾದಿಗಳ ತಂದೆಯ ಜೀವಿತದ ಅವಧಿಯಲ್ಲಿ, ವಾದಿಗಳು ಎಂದರೆ ಮಲ್ಲಪ್ಪ, ಇವನು ದಾವೆಯ ದಿನಾಂಕದಂದು ಇದ್ದಂತೆ 35 ಲಕ್ಷ ರೂ.ಗಳಿಗಿಂತ ಹೆಚ್ಚಿನ ಬೆಲೆ ಬಾಳುತ್ತಿದ್ದರೂ 12,000/–ರೂ.ಗಳ ಅಲ್ಪಮೊತ್ತಕ್ಕೆ ಸ್ವತ್ತನ್ನು ಮಾರಾಟ ಮಾಡಲು ಮುಂದಾಗಿದ್ದನು. ಸದರಿ ಸ್ವತ್ತನ್ನು ಅಪೀಲುದಾರನ ಹೆಸರಿನಲ್ಲಿ ಮೃತ ಮಲ್ಲಪ್ಪನು ದಿನಾಂಕ 1.7.1992ರ ಮೋಸದ ಮಾರಾಟದ ಅಡಿಯಲ್ಲಿ ಮಾರಾಟ ಮಾಡಲಾಗಿದೆಯೆಂದು ಹೇಳಲಾಗಿತ್ತು. ಈ ಪೂರ್ವಪಕ್ಷದಂದು ಎಂದರೆ, ಮಾರಾಟ ವ್ಯವಹಾರವು ವಾದಿಗಳನ್ನು ಬದ್ಧಗೊಳಿಸಿರಲಿಲ್ಲವೆಂದೂ, ದಾವೆಯನ್ನು ಹೂಡಲಾಗಿತ್ತೆಂದೂ ಹಾಗೂ ಪ್ರಸ್ತುತ ಅಪೀಲುದಾರನು, ಪೂರ್ವ ನ್ಯಾಯನಿರ್ಣಯ ಸಿದ್ಧಾಂತವು ದಾವೆಯನ್ನು ಪ್ರತಿಷೇಧಿಸಿತ್ತೆನ್ನುವ ಹಾಗೆಯೇ ಸಕಾಲದಲ್ಲಿ ನಿಷೇಧಿಸಲಾಗಿತ್ತೆಂಬ ಆಧಾರವನ್ನೂ ಒಳಗೊಂಡಂತೆ ಕೆಲವು ಆಧಾರಗಳ ಮೇಲೆ ದಾವೆಯನ್ನು ಪ್ರತಿರೋಧಿಸಲಾಗಿತ್ತೆಂಬುದಾಗಿದೆ. ಅಷ್ಟೇ ಅಲ್ಲದೆ, ಬೀಳಗಿಯ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಕಡತದಲ್ಲಿ ಮೂಲದಾವೆ ಸಂಖ್ಯೆ:11/1999ರಲ್ಲಿ ವಾದಿಗಳ ಮೃತತಾಯಿ ಹಾಗೂ ವಾದಿಗಳ ಮೃತ ಸಹೋದರ ಎಂದರೆ ಅನುಕ್ರಮವಾಗಿ ಹನುಮವ್ವ ಹಾಗೂ ಶೇಖಪ್ಪ, ಇವರು ಮೊದಲು ದಾವೆಯನ್ನು ಸಲ್ಲಿಸಿದ್ದರು ಎಂದು ವಾದಿಸಿದ್ದಾರೆ.

3. ಮೇಲಿನ ಹಾಗೂ ಇತರ ವಾದಗಳ ಆಧಾರದ ಮೇಲೆ ಅಧೀನ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

*"1. ವಾದಿಗಳು ತಾವು ಹಾಗೂ ಪ್ರತಿವಾದಿಗಳು ಕೂಡು ಕುಟುಂಬದಿಂದ ಕೂಡಿದ ಸದಸ್ಯರಾಗಿದ್ದು, ದಾವಾ ಸ್ವತ್ತು ಕೂಡು ಕುಟುಂಬದ*

*ಸ್ವತ್ತಾಗಿತ್ತು ಎಂಬುದನ್ನು ವಾದಿಗಳು ರುಜುವಾತು ಪಡಿಸಿದ್ದಾರೆಯೇ?*

*2. ಮೃತ ಮಲ್ಲಪ್ಪನು ಹಿಂದೂ ಅವಿಭಕ್ತ ಕುಟುಂಬದ ಕರ್ತನಾಗಿ, ದಿನಾಂಕ:1.7.1992ರಂದು ತನ್ನ ಕುಟುಂಬಕ್ಕಾಗಿ ಹಾಗೂ ಕಾನೂನಿನ ಅಗತ್ಯತೆಗಾಗಿ ಅವಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದನು ಎಂಬುದನ್ನು 5ನೇ ಸಂಖ್ಯೆಯ ಪ್ರತಿವಾದಿಯು ರುಜುವಾತು ಪಡಿಸಿದ್ದಾನೆಯೇ?*

*3. ದಾವೆಯನ್ನು ಕಾಲಪರಿಮಿತಿಯಿಂದಾಗಿ ಪ್ರತಿಷೇಧಿಸಲಾಗಿತ್ತು ಎಂದು 5ನೇ ಸಂಖ್ಯೆಯ ಪ್ರತಿವಾದಿಯು ರುಜುವಾತು ಪಡಿಸಿದ್ದಾನೆಯೇ?*

*4. ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣದ ಕಾರಣದಿಂದಾಗಿ ದಾವೆ ಧಕ್ಕೆಯುಂಟಾಗಿದೆ ಎಂಬುದನ್ನು 5ನೇ ಪ್ರತಿವಾದಿಯು ರುಜುವಾತುಪಡಿಸಿದ್ದಾನೆಯೇ?*

*5. ಕೋರಲಾದ ಪರಿಹಾರಕ್ಕೆ ವಾದಿಗಳು ಹಕ್ಕುಳ್ಳವರಾಗಿದ್ದಾರೆಯೇ?*

ಅಧೀನ ನ್ಯಾಯಾಲಯವು, ವಿವಾದಾಂಶ ಸಂ.1ಕ್ಕೆ ಸಕಾರಾತ್ಮಕವಾಗಿ, 2 ರಿಂದ 4 ರ ವರೆಗಿನ ವಿವಾದಾಂಶಕ್ಕೆ ನಕಾರಾತ್ಮಕವಾಗಿ ಹಾಗೂ ವಿವಾದಾಂಶ ಸಂಖ್ಯೆ.5ಕ್ಕೆ ಭಾಗಶಃವಾಗಿ ಸಕಾರಾತ್ಮಕವಾಗಿ ಉತ್ತರಿಸಿದ್ದು, ದಾವೆಯುನ್ನು ಡಿಕ್ರಿಗೊಳಿಸಿದೆ. ಇದರಿಂದಾಗಿ ಪ್ರಸ್ತುತ ಅಪೀಲನ್ನು ಇದರ ಅಡಿಯಲ್ಲಿ ಪ್ರಶ್ನಿಸಲಾಗಿದೆ.

4. ಶ್ರೀ ಎಸ್.ಬಿ. ಹೆಬ್ಬಳ್ಳಿಯುವರು, ದಾವೆಯುನ್ನು ಪೂರ್ವ ನ್ಯಾಯನಿರ್ಣಯದಿಂದಾಗಿ ಪ್ರತಿಷೇಧಿಸುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಅಧೀನ

ನ್ಯಾಯಾಲಯವು, ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಅನ್ವಯಿಸುವ ಕಾನೂನು ಸ್ಥಾನಮಾನವನ್ನು ಮೌಲ್ಯಮಾಪನ ಮಾಡುವಲ್ಲಿ ವಿಫಲವಾಗಿದೆಯೆಂದು ವಾದಿಸಿದ್ದಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ (ಇಲ್ಲಿ ಇನ್ನು ಮುಂದೆ ಸಿಪಿಸಿ ಎಂದು ಸಂಕ್ಷಿಪ್ತತೆವಾಗಿ ಉಲ್ಲೇಖಿಸಲಾಗಿದೆ) 11ನೇ ಪ್ರಕರಣವು, ವಾದಿಗಳ ತಾಯಿ ಹಾಗೂ ಸಹೋದರರನು ಸಲ್ಲಿಸಿದ ಹಿಂದಿನ ದಾವೆಯಲ್ಲಿ, ಪ್ರತ್ಯಕ್ಷವಾಗಿ ಮತ್ತು ಗಣನೀಯವಾಗಿ ಉದ್ಭವವಾಗಿರುವ ವಿವಾದವು ವಾದಿಗಳಿಗೆ ಬದ್ಧವಾಗಿರುವಾಗ ಸದರಿ ವಿವಾದಾಂಶಕ್ಕೆ ಆ ದಾವೆಯಲ್ಲಿ ನಿರ್ಣಯ ನೀಡಿರುವಾಗ, ದಾವೆಯನ್ನು ಅಧಿವಿಚಾರಣೆ ಮಾಡುವುದೆಂದು ಹೇಳಲಾಗಿರುವ ಅಧೀನ ನ್ಯಾಯಾಲಯವು ಸ್ಪಷ್ಟವಾಗಿ ಪ್ರತಿಷೇಧಿಸಿದ್ದು ಇದಕ್ಕೆ, ದಾವೆಯನ್ನು ಸಲ್ಲಿಸುವುದರಿಂದ ಅವರಿಗೆ ಅಡ್ಡಿಯಾದ ವಾದಿಗಳು ಬದ್ಧರಾಗಿದ್ದು ನ್ಯಾಯಾಲಯವು ಅದನ್ನು ಪುರಸ್ಕರಿಸಿತ್ತು. ಈ ಸಂಬಂಧದಲ್ಲಿ, ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣದ ಯಥಾರ್ಥ ತಾತ್ಪರ್ಯದ ಕಡೆ ಗಮನಸೆಳೆದಿದ್ದು, ಅವರು ಅದರಲ್ಲಿ ಏನೇ ಒಳಗೊಂಡಿದ್ದರು, ವಾದಿಗಳು ಮೊದಲಿನ ದಾವೆಗೆ ಪಕ್ಷಕಾರರಾಗಿರಲಿಲ್ಲವೆಂಬ ತಮ್ಮ ವಾದವನ್ನು ಸುಭದ್ರಗೊಳಿಸಲು, ಅದಕ್ಕೆ ಸೇರಿಸಲಾದ ವಿವರಣೆ – 6ರನ್ನು ಸಹ ಅವಲಂಬಿಸಿದ್ದು, ಅವರು ಹಳೆಯ ದಾವೆಯುಲ್ಲಿ ಅವರ ತಾಯಿ ಮತ್ತು ಸಹೋದರರೊಂದಿಗೆ ಕ್ಲೇಮು ಮಾಡಲಾಗಿದೆಯೆಂದು ಅವರು ಭಾವಿಸಿದ್ದರು. ಆದುದರಿಂದ 11ನೇ ಪ್ರಕರಣವನ್ನು ಪೂರ್ಣವಾಗಿ ಅನ್ವಯಿಸಲಾಗಿದೆ. ಈ ಸಂಬಂಧದಲ್ಲಿ, ಅವರು, ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ನಿರ್ಣಯಗಳ ಮೇಲೆ ಅವಲಂಬಿತರಾಗಿದ್ದಾರೆ.

*"(ಎ) ಸುಲೋಚನಮ್ಮ –ವಿರುದ್ಧ – ನಾರಾಯಣನ್ ನಾಯರ್ (1994)2 ಎಸ್‌ಸಿಸಿ 14.*

*(ಬಿ) ಗ್ರೇಟರ್ ಬಾಂಬೆಯು ಮುನಿಸಿಪಲ್ ಕಾರ್ಪೊರೇಷನ್ ಮುಂದುವರಿದ ನಿರ್ಮಾಣ ಕಂಪನಿ ಪ್ರಭಾತ್ ಮಂಡಲ್ ವಿರುದ್ಧ ಗ್ರೇಟರ್ ಬಾಂಬೆಯು ಮುನಿಸಿಪಲ್ ಕಾರ್ಪೊರೇಷನ್, ಮುಂದುವರಿದ ನಿರ್ಮಾಣ ಕಂಪನಿ ಪ್ರಭಾತ್ ಮಂಡಲ್*

*(ನೋಂದಾಯಿತ) ಅಂದೇರಿ ಪ್ರಭಾತ್ ಮಂಡಲ್, ಎಐಆರ್ 1986 ಎಸ್‌ಸಿ 391.*

11ನೇ ಪ್ರಕರಣದ ಉದ್ದೇಶ, ವ್ಯವಹರಣೆಗಳ ಬಾಹುಳ್ಯವನ್ನು ತಡೆಯುವುದಾಗಿದೆ ಎಂದು ವಾದಿಸಿದ್ದಾರೆ ಹಾಗೂ ವಾದಿಗಳ ದಾವೆಯು, ನಿಜಸ್ಥಿತಿಯ ಪುನರಾವರ್ತನೆಯಾಗಿತ್ತೆಂದು ಹಾಗೂ ವಾದಿಗಳ ತಾಯಿ ಹಾಗೂ ಮೃತ ಸಹೋದರನಿಂದ ಕೊಂಡುಕೊಂಡದ್ದರಿಂದ ದಾವಾ ಕ್ಲೇಮಿನ ಆಧಾರವಾಗಿದೆಯೆಂದು ವಾದಿಸಿದ್ದಾರೆ, ಆದುದರಿಂದ ಸಮರ್ಥನೀಯವಾಗಿದೆ. ಅದರಲ್ಲಿ ಎರಡೂ ದಾವೆಗಳಲ್ಲಿ ಮುಖ್ಯ ವಿವಾದಾಂಶ ಏನೆಂದರೆ ಎರಡೂ ದಾವೆಗಳಲ್ಲಿ ವಾದಿಗಳ ತಂದೆ ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರಕ್ಕೆ ವಾದಿಗಳು ಬದ್ಧರಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಎತ್ತಿ ತೋರಿಸಿದ್ದಾರೆ. ಅಂತಿಮವಾಗಿ ಸದರಿ ನಿರ್ಣಯಕ್ಕೆ ಬಂದಿದ್ದು, ಮೊದಲಿನ ದಾವೆಗೆ ಅವರು ಪಕ್ಷಕಾರರಾಗಿರಲಿಲ್ಲ, ಆದುದರಿಂದ ಅವರು ಅವರ ಸರಿಯಾದ ಹಕ್ಕನ್ನು ಒತ್ತಾಯಿಸುವ ಹೊಸ ದಾವೆಯನ್ನು ಸಲ್ಲಿಸಲು ಹಕ್ಕುಳ್ಳವರಾಗಿರುವರು ಎನ್ನುವ ಆಧಾರದಿಂದಲೇ ವಾದಿಗಳ ಕೋರಿಕೆಯ ಮೇರೆಗೆ ಪುನಃ ತೆರೆಯಲು ಸಾಧ್ಯವಾಗದಿರುವುದರಿಂದ ವಾದಿಗಳ ಮೃತ ತಾಯಿ ಹಾಗೂ ಮೃತ ಸಹೋದರನ ವಿರುದ್ಧ ಹೂಡಲಾಗಿರುವ ಮೊದಲಿನ ದಾವೆಯ ಆಧಾರವನ್ನು ದೃಢೋಕ್ತಿಯು ರೂಪಿಸಿದೆ.

5. ಮತ್ತೊಂದು ಕಡೆ, ಮಾನ್ಯ ವಕೀಲರಾದ ಶ್ರೀ ಅಂಗಡಿಯವರು, ಈ ವಾದವನ್ನು 11ನೇ ಪ್ರಕರಣದ ಮೇರೆಗೆ, ಹಾಗೂ ಇದರಡಿಯಲ್ಲಿ, ಪೂರ್ವ ನ್ಯಾಯನಿರ್ಣಯದ ಯಾವ ಸಿದ್ಧಾಂತವನ್ನು ಅನ್ವಯಿಸಬಹುದಾಗಿದೆಯೆಂಬ ಮಾನದಂಡಗಳನ್ನು ಒತ್ತಿ ಹೇಳಿದ್ದಾರೆ. ಘಟಕಾಂಶಗಳಲ್ಲಿ ಒಂದನೆಯದು ಯಾವುದೆಂದರೆ, ದಾವೆಯು ಅದೇ ಪಕ್ಷಕಾರರ ನಡುವೆ ಇರಬೇಕು. ಒಪ್ಪಿಕೊಂಡಿರುವಂತೆ, ಪ್ರಸ್ತುತ ವಾದಿಗಳು ಈ ಮೊದಲಿನ ಪಕ್ಷಕಾರರಾಗಿರಲಿಲ್ಲ. ಮೊದಲಿನ ದಾವೆಯನ್ನು ಈಗಿನ ವಾದಿಗಳ ಮೃತ ತಾಯಿ ಹಾಗೂ ಸೋದರ ತಂದಿದ್ದು, ವಂಶಾವಳಿ ಅಥವಾ ವಂಶವೃಕ್ಷವನ್ನು ಸೂಚಿಸಿಲ್ಲ ಹಾಗೂ ವಾದಿಗಳು ಅಪ್ರಾಪ್ತ ವಯಸ್ಕರಾಗಿದ್ದು, ಅವರ ಹಿತಾಸಕ್ತಿಯನ್ನು ಹಿಂದಿನ ದಾವೆಯಲ್ಲಿ ಎಲ್ಲಿಯೂ

ತಿಳಿಸಿಲ್ಲ. ಎಲ್ಲಾ ಉದ್ದೇಶಗಳಿಗಾಗಿ ಆ ದಾವೆಯಲ್ಲಿ ಈ ವಾದಿಗಳು ಇರುವುದನ್ನೂ ಸಹ ಸೂಚಿಸಿಲ್ಲ. ಅವರು ಅಧೀನ ನ್ಯಾಯಾಲಯದ ಮುಂದೆ ಎಲ್ಲೂ ಪ್ರತಿಭಟಿಸಿಲ್ಲ ಅಥವಾ ಅವರ ಹಕ್ಕನ್ನೂ ಹೊಂದಿಲ್ಲ, ಅವರು ಹಿಂದಿನ ದಾವೆಯಲ್ಲಿ ನ್ಯಾಯಾಲಯವು ಮಾಡಿದ ಪರಿಗಣನೆಯನ್ನು ತೋರಿಸಿದ್ದಾರೆ. ಹೀಗಾಗಿ ಕಲ್ಪನೆಯನ್ನು ಮಾಡಿಕೊಳ್ಳುವ ಮೂಲಕ, ಈ ವಾದಿಗಳ ಹಕ್ಕನ್ನು ಹಿಂದಿನ ದಾವೆಯಲ್ಲಿ ಕೋರಲಾಗಿದೆ ಹಾಗೂ ವಾದಿಗಳನ್ನು ತಮ್ಮ ಹಕ್ಕನ್ನು ಒತ್ತಿಹೇಳುವುದರಿಂದ ಪ್ರತಿವಾರಿಸದಿದ್ದರೆ ಇದರಿಂದ ನ್ಯಾಯದ ವಿಫಲತೆಯಾಗಿದೆಯೆಂದು ಅಭಿಪ್ರಾಯಪಡಲಾಗುವುದಿಲ್ಲ. ಆದುದರಿಂದ ಅಧಿವಿಚಾರಣಾ ನ್ಯಾಯಾಲಯವು, ಸರಿಯಾಗಿ, ವಾದಿಗಳ ಪರವಾಗಿ ದಾವೆಯನ್ನು ಡಿಕ್ರಿಗೊಳಿಸಿದೆ ಹಾಗೂ ಅಧೀನ ನ್ಯಾಯಾಲಯವು ಯಾವುದೇ ಕ್ರಮದೋಷವನ್ನು ಎಸಗಿರುವುದಿಲ್ಲ ಅಥವಾ ಕಾನೂನು ಬಾಹಿರತೆ ಇರುವುದಿಲ್ಲ. ಅಧೀನ ನ್ಯಾಯಾಲಯವು, ವಾದಿಗಳು ತಮ್ಮ ಮೃತ ಸಹೋದರರ ಮೂಲಕ ಕ್ಲೇಮು ಮಾಡಿರಲಿಲ್ಲವೆಂಬ ಕಾರಣವನ್ನು ನೀಡಿದ್ದಾರೆ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣವು, ಸದೃಶ ಹಕ್ಕನ್ನು ಹೊಂದಿರುವ ಯಾರೇ ಒಬ್ಬರು ಅಥವಾ ಮೊದಲಿನ ವಾದಿಗಳು ಮಾತ್ರವೇ ಯಾವುದೇ ಒಂದನ್ನು ಕ್ಲೇಮು ಮಾಡುವುದು ಪೂರ್ವ ನ್ಯಾಯ ನಿರ್ಣಯದ ಪ್ರತಿಷೇಧವನ್ನು ಅಗತ್ಯಪಡಿಸುವುದರಿಂದ ವಾದಿಗಳು ಅವರ ಸಹೋದರರ ಮೂಲಕ ಕ್ಲೇಮು ಮಾಡದಿರುವುದರಿಂದ ಆದರೆ, ಪ್ರಸ್ತುತ ದಾವೆಯಲ್ಲಿ ಪ್ರತ್ಯೇಕ ಹಕ್ಕನ್ನು ಕೋರಿದ್ದು ಹಿಂದಿನ ದಾವೆಯಲ್ಲಿ ಎಲ್ಲಿಯೂ ಒತ್ತಾಯಿಸಿರುವುದಿಲ್ಲ ಅಥವಾ ಮಂಡಿಸಿರುವುದಿಲ್ಲ. ಅವರು ಹಾಗೆ ಮಾಡುವುದಕ್ಕೆ ಅವಕಾಶ ನೀಡಲಾಗಿರುವುದಿಲ್ಲ. ಹೀಗಾಗಿ ಅವನು, ವಾದಿಗಳ ಮೃತ ತಾಯಿ ಹಾಗೂ ಮೃತ ಸಹೋದರರನು ಸಲ್ಲಿಸಿದ ಹಿಂದಿನ ದಾವೆಯನ್ನು ವಜಾಗೊಳಿಸಿ ಅಂತಿಮ ನಿರ್ಧಾರಕ್ಕೆ ಬಂದಿರುವರು ಎಂಬುದರಲ್ಲಿ ಏನೇ ಇದ್ದರೂ, ದಾವೆಯನ್ನು ಡಿಕ್ರಿಗೊಳಿಸಿ ಅಧೀನ ನ್ಯಾಯಾಲಯದ ನಿರ್ಣಯವನ್ನು ಸಮರ್ಥಿಸಲು ಅವನು ಕೋರಿರುವನು.

6. ಈ ಪ್ರತಿವಾದಗಳ ಹಿನ್ನೆಲೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ಪ್ರಕರಣವನ್ನು ಮರುಹಾಜರುಪಡಿಸುವುದು ಉಪಯುಕ್ತಕರವಾಗಿದ್ದು ಅದನ್ನು ಈ ಮುಂದಿನಂತೆ ಓದಲಾಗಿದೆ:

ಒಂದು ದಾವೆಯಲ್ಲಿ ಅಥವಾ ವಿವಾದಾಂಶದಲ್ಲಿ ನೇರವಾಗಿಯೂ ಸಾರಭೂತವಾಗಿಯೂ ವಿವಾದ್ಯವಾಗಿರುವ ವಿಷಯವು, ಅದೇ ಸ್ವಾಮ್ಯದ ಆಧಾರದ ಮೇಲೆ ವ್ಯಾಜ್ಯ ನಡೆಯುತ್ತಿರುವ ಅದೇ ಪಕ್ಷಕಾರರು ಅಥವಾ ಯಾರ ಅಧೀನದಲ್ಲಿ ಅವರು ಇಲ್ಲವೋ ಅವರಲ್ಲಿ ಯಾರಾದರೂ ಕ್ಲೇಮು ಮಾಡುತ್ತಿರುವರೋ ಅವರು ಪಕ್ಷಕಾರರಾಗಿದ್ದು, ಅಂತಹ ಅನಂತರ ದಾವೆಯನ್ನು, ಅಥವಾ ಅಂಥ ವಿವಾದಾಂಶವನ್ನು ಯಾವ ದಾವೆಯಲ್ಲಿ ಅನಂತರ ಎತ್ತಲಾಗಿದೆಯೆ ಆ ದಾವೆಯನ್ನು ಅಧಿವಿಚಾರಣೆ ಮಾಡಲು ಸಕ್ಷಮವಾಗಿರುವ ನ್ಯಾಯಾಲಯವೊಂದರಲ್ಲಿ ಮೊದಲಿನ ದಾವೆಯೊಂದರಲ್ಲಿ ನೇರವಾಗಿಯೂ ಸಾರಭೂತವಾಗಿಯೂ ವಿವಾದ್ಯವಾಗಿದ್ದು ಮತ್ತು ಆ ನ್ಯಾಯಾಲಯದಿಂದ ಸುನಾವಣೆಯಾಗಿ ಅಂತಿಮವಾಗಿ ತೀರ್ಮಾನಿತವಾಗಿದ್ದರೆ, ಆ ದಾವೆಯನ್ನು ಅಥವಾ ವಿವಾದಾಂಶವನ್ನು ಯಾವ ನ್ಯಾಯಾಲಯವೂ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**ವಿವರಣೆ I**: "ಮೊದಲಿನ ದಾವೆ" ಎಂಬ ಪದಾವಳಿಯು, ಪ್ರಶ್ನೆಯಲ್ಲಿರುವ ದಾವೆಗೆ ಮುಂಚೆ ತೀರ್ಮಾನಿಸಲಾದ ದಾವೆಯನ್ನು ಸೂಚಿಸತಕ್ಕದ್ದು ಅದನ್ನು ಆ ದಾವೆಗೆ ಮುಂಚೆಯೇ ಹೂಡಿರಬಹುದು ಅಥವಾ ಹೂಡಿರದಿರಬಹುದು.

**ವಿವರಣೆ II:** ಈ ಪ್ರಕರಣದ ಉದ್ದೇಶಗಳಿಗಾಗಿ, ನ್ಯಾಯಾಲಯದ ಸಕ್ಷಮತೆಯನ್ನು, ಅಂಥ ನ್ಯಾಯಾಲಯದ ತೀರ್ಮಾನದ ಮೇಲೆ ಇರುವ ಅಪೀಲಿನ ಹಕ್ಕಿಗೆ ಸಂಬಂಧಿಸಿದ ಯಾವುವೇ ಉಪಬಂಧಗಳನ್ನು ಗಣನೆಗೆ ತೆಗೆದುಕೊಳ್ಳದೆ, ನಿರ್ಧರಿಸತಕ್ಕದ್ದು.

**ವಿವರಣೆ III**: ಮೇಲೆ ಉಲ್ಲೇಖಿಸಿದ ವಿಷಯವು, ಮೊದಲಿನ ದಾವೆಯಲ್ಲಿ ಒಬ್ಬ ಪಕ್ಷಕಾರನಿಂದ ಹೇಳಲ್ಪಟ್ಟಿರಬೇಕು ಮತ್ತು

ಎರಡನೆಯ ಪಕ್ಷಕಾರನಿಂದ ವ್ಯಕ್ತವಾಗಿ ಅಥವಾ ಇಂಗಿತವಾಗಿ ಅದು ಅಲ್ಲಗಳೆಯಲ್ಪಟ್ಟಿರಬೇಕು ಅಥವಾ ಒಪ್ಪಲ್ಪಟ್ಟಿರಬೇಕು.

**ವಿವರಣೆ IV**: ಅಂಥ ಮೊದಲಿನ ದಾವೆಯಲ್ಲಿ ಪ್ರತಿರಕ್ಷೆಯ ಅಥವಾ ವಿರೋಧದ ಆಧಾರವನ್ನಾಗಿ ಮಾಡಬಹುದಾಗಿದ್ದ ಮತ್ತು ಮಾಡಲೇಬೇಕಾಗಿದ್ದ ಯಾವುದೇ ವಿಷಯವು, ಅಂಥ ದಾವೆಯಲ್ಲಿ ನೇರವಾಗಿ ಮತ್ತು ಸಾರಭೂತವಾಗಿ ವಿವಾದ್ಯವಾದ ವಿಷಯವಾಗಿದ್ದಿತೆಂದು ಭಾವಿಸಲ್ಪಡತಕ್ಕದ್ದು.

**ವಿವರಣೆ V**: ವಾದಪತ್ರದಲ್ಲಿ ಕ್ಲೇಮು ಮಾಡಲಾಗಿದ್ದು ಡಿಕ್ರಿಯಲ್ಲಿ ವ್ಯಕ್ತವಾಗಿ ಕೊಟ್ಟಿರುವ ಯಾವುದೇ ಪರಿಹಾರವು, ಈ ಪ್ರಕರಣದ ಉದ್ದೇಶಗಳಿಗಾಗಿ, ಇಂಕಾರ ಮಾಡಲ್ಪಟ್ಟಿದೆಯೆಂದು ಭಾವಿಸತಕ್ಕದ್ದು.

**ವಿವರಣೆ VI**: ವ್ಯಕ್ತಿಗಳು ತಮಗಾಗಿ ಮತ್ತು ಇತರರಿಗಾಗಿ ಸಾಮೂಹಿಕವಾಗಿ ಕ್ಲೇಮು ಮಾಡಿದ ಸಾರ್ವಜನಿಕ ಹಕ್ಕಿನ ಅಥವಾ ಖಾಸಗಿ ಹಕ್ಕಿನ ಬಗ್ಗೆ ನ್ಯಾಯಾಲಯದಲ್ಲಿ ಸದ್ಭಾವನೆಯಿಂದ ವ್ಯಾಜ್ಯ ನಡೆಸುತ್ತಿರುವಲ್ಲಿ, ಅಂಥ ಹಕ್ಕಿನಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳು, ಈ ಪ್ರಕರಣದ ಉದ್ದೇಶಗಳಿಗಾಗಿ, ಹಾಗೆ ವ್ಯಾಜ್ಯ ನಡೆಸುತ್ತಿರುವ ವ್ಯಕ್ತಿಗಳ ಅಧೀನದಲ್ಲಿ ಕ್ಲೇಮು ಮಾಡುತ್ತಿರುವರೆಂದು ಭಾವಿಸತಕ್ಕದ್ದು.

**ವಿವರಣೆ VII**: ಈ ಪ್ರಕರಣದ ಉಪಬಂಧಗಳು ಡಿಕ್ರಿಯನ್ನು ಅಮಲ್ಜಾರಿ ಮಾಡುವ ವ್ಯವಹರಣೆಗೆ ಅನ್ವಯಿಸತಕ್ಕದ್ದು ಮತ್ತು ಈ ಪ್ರಕರಣದಲ್ಲಿ ಯಾವುದೇ ದಾವೆ, ವಿವಾದಾಂಶ ಅಥವಾ ಮೊದಲಿನ ದಾವೆಯ ಬಗ್ಗೆ ಮಾಡಲಾಗಿರುವ ಉಲ್ಲೇಖಗಳನ್ನು ಅನುಕ್ರಮವಾಗಿ, ಡಿಕ್ರಿಯನ್ನು ಅಮಲ್ಜಾರಿ ಮಾಡುವ ವ್ಯವಹರಣೆ, ಅಂಥ ವ್ಯವಹರಣೆಯಲ್ಲಿ ಉದ್ಭವಿಸುವ ಪ್ರಶ್ನೆ ಮತ್ತು ಆ ಡಿಕ್ರಿಯ

ಅಮಲ್ಜಾರಿಗಾಗಿ ನಡೆಸಲಾದ ಮೊದಲಿನ ವ್ಯವಹರಣೆ – ಇವುಗಳ ಬಗೆಗಿನ ಉಲ್ಲೇಖಗಳೆಂದು ಅರ್ಥ ಮಾಡತಕ್ಕದ್ದು.

**ವಿವರಣೆ VIII** : ಅಂಥ ವಿವಾದಾಂಶವನ್ನು ತೀರ್ಮಾನಿಸಲು ಸಕ್ಷಮವಾಗಿರುವ ಪರಿಮಿತ ಅಧಿಕಾರ ವ್ಯಾಪ್ತಿಯ ನ್ಯಾಯಾಲಯದಿಂದ ಸುನಾವಣೆಯಾದ ಮತ್ತು ಅಂತಿಮವಾಗಿ ತೀರ್ಮಾನಿತವಾದ ಒಂದು ವಿವಾದಾಂಶವು, ಆ ಪರಿಮಿತ ಅಧಿಕಾರ ವ್ಯಾಪ್ತಿಯಿರುವ ಆ ನ್ಯಾಯಾಲಯವು ಅನಂತರದ ದಾವೆಯನ್ನು ಅಥವಾ ಯಾವ ದಾವೆಯಲ್ಲಿ ಅಂಥ ವಿವಾದಾಂಶವನ್ನು ಅನಂತರ ಎತ್ತಲಾಗಿದೆಯೋ ಆ ದಾವೆಯನ್ನು ಅಧಿವಿಚಾರಣೆ ಮಾಡಲು ಸಕ್ಷಮವಾಗಿರದಿದ್ದರೂ, ಅಂಥ ಅನಂತರದ ದಾವೆಯಲ್ಲಿ ಪೂರ್ವ ನ್ಯಾಯವಾಗಿ ಪ್ರವರ್ತಿಸತಕ್ಕದ್ದು.

ಮೇಲೆ ಗೆರೆ ಎಳೆಯಲಾದ ಭಾಗಗಳು, ಯಾರ ಮೂಲಕ ಅವರು ಅಥವಾ ಅವರಲ್ಲಿ ಯಾರಾದರೊಬ್ಬರು ಪಕ್ಷಕಾರರು, ಅದೇ ಶೀರ್ಷಿಕೆಯ ಅಡಿಯಲ್ಲಿ ಕ್ಲೇಮನ್ನು, ವ್ಯಾಜ್ಯ ಹೂಡಿರುವುದು ಮಹತ್ವದ್ದಾಗಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಮೊದಲಿನ ದಾವೆಯಲ್ಲಿ ವಾದಿಗಳ ಸಂಬಂಧವನ್ನು ನಿರಾಕರಿಸಲಾಗುವುದಿಲ್ಲ ಅಥವಾ ಎರಡೂ ದಾವೆಗಳ ಆಧಾರವನ್ನು ನಿರಾಕರಿಸಲೂ ಇಲ್ಲ ಎಂದರೆ ಹಿಂದಿನ ದಾವೆಯಲ್ಲಿ ವಾದಿಗಳ ತಂದೆ ಹಾಗೂ ವಾದಿಗಳ ಪತಿ ಹಾಗೂ ತಂದೆಯಾದ ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರವು ವಾದಿಗಳಿಗೆ ಬದ್ಧರಾಗಿರಲಿಲ್ಲ ಎಂಬುದಾಗಿದೆ. ನೋಡಬಹುದಾದಂತೆ ಹಿಂದಿನ ದಾವೆಯಲ್ಲಿ ರೂಪಿಸಲಾದ ವಿವಾದಾಂಶಗಳು ಈ ಮುಂದಿನಂತಿವೆ:

“1. ದಾವಾ ಸ್ವತ್ತು ಅವರ ಪೂರ್ವಿಕರ ಸ್ವತ್ತಾಗಿದ್ದು, ಅವರಿಗೆ ಸದರಿ ಸ್ವತ್ತಿನಲ್ಲಿ 2/3 ರಷ್ಟು ಪಾಲನ್ನು ಹೊಂದಿರುವರು ಎಂಬುದನ್ನು ವಾದಿಗಳು ರುಜುವಾತುಪಡಿಸಿದ್ದಾರೆಯೇ?

2. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ: 1.7.1992ರಂದು ಮಲ್ಲಪ್ಪ ಹರಿಪಲ್ಲೆರವರು ಬರೆದುಕೊಟ್ಟ ವಿವಾದಿತ ಕ್ರಯಪತ್ರವು,

ದಾವಾ ಸ್ವತ್ತಿನಲ್ಲಿ 2/3 ರಷ್ಟು ಅವರ ಪಾಲನ್ನು ಆಧರಿಸಿರಲಿಲ್ಲವೆಂಬುದನ್ನು ವಾದಿಗಳು ರುಜುವಾತು ಪಡಿಸಿದ್ದಾರೆಯೇ?

3. ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಇದ್ದಂತೆ ದಾವಾ ಸ್ವತ್ತನ್ನು ಅವರು ಕಾನೂನುಬದ್ಧವಾಗಿ ಸ್ವಾಧೀನದಲ್ಲಿದ್ದಾರೆ ಮತ್ತು ಅನುಭೋಗದಲ್ಲಿದ್ದಾರೆ ಎಂಬುದನ್ನು ವಾದಿಗಳು ರುಜುವಾತು ಪಡಿಸಿದ್ದಾರೆಯೇ?

4. ಸದರಿ ಸ್ವತ್ತಿನ ಸ್ವಾಧೀನತೆಯಲ್ಲಿ ಹಾಗೂ ಅನುಭೋಗದಲ್ಲಿ ಪ್ರತಿವಾದಿಯು ಹಸ್ತಕ್ಷೇಪ ಮಾಡಿರುವರು ಎಂಬುದನ್ನು ವಾದಿಗಳು ರುಜುವಾತುಪಡಿಸಿದ್ದಾರೆಯೇ?

5. ವಾದಿಗಳ ದಾವೆಯು ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿದೆ ಎಂಬುದನ್ನು ಪ್ರತಿವಾದಿಯು ರುಜುವಾತುಪಡಿಸಿದ್ದಾನೆಯೇ?

6. ವಾದಿಗಳು ಸಂದಾಯ ಮಾಡಿದ ನ್ಯಾಯಾಲಯ ಶುಲ್ಕವು ಸಾಕಷ್ಟಿದೆ ಎಂಬುದು ರುಜುವಾತಾಗಿದೆಯೇ?"

ನೋಡಬಹುದಾದಂತೆ, ಇದರಲ್ಲಿರುವ ವಿವಾದಾಂಶ ಸಂ.2 ಹಾಗೂ ಸದ್ಯದ ದಾವೆಯಲ್ಲಿರುವ ವಿವಾದಾಂಶ ಸಂ.2 ಮಲ್ಲಪ್ಪನು ಬರೆದುಕೊಟ್ಟ ಪ್ರಸ್ತುತ ಅದೇ ಕ್ರಯಪತ್ರಕ್ಕೆ ಸಂಬಂಧಪಟ್ಟದುದಾಗಿದೆ. ಇನ್ನೊಂದು ರೀತಿಯಲ್ಲಿ, ಸದರಿ ವಿವಾದದ ಸಂಬಂಧ ನಿರ್ಣಯದ ಮೇಲೆ ವಾದಿಗಳು ವ್ಯಕ್ತಪಡಿಸುವ ಹಕ್ಕು ಏನಾದರೂ ಇದ್ದರೆ, ಅದನ್ನು ಈಗಾಗಲೇ ಸಲ್ಲಿಸಲಾಗಿದ್ದು ಅಂತಿಮತೆಯನ್ನು ತಲುಪಿದೆ. ವಾದಿಗಳಿಗಿರುವ ಹಕ್ಕಿಗಿಂತ ಭಿನ್ನವಾಗಿರದ ಹಿಂದಿನ ದಾವೆಯಲ್ಲಿ

ಕ್ಲೇಮು ಮಾಡಲಾದ ವಾದಿಗಳ ಮೃತ ಸಹೋದರನ ಹಕ್ಕು ಪ್ರಸ್ತುತ ದಾವೆಯಲ್ಲಿ ಕ್ಲೇಮು ಮಾಡಿರುವುದಾಗಿದೆ. ಪೂರ್ವ ನ್ಯಾಯನಿರ್ಣಯದ ಪ್ರತಿಷೇಧವನ್ನು ಅನ್ವಯಿಸುವ ಸಲುವಾಗಿ ಪ್ರಸ್ತುತ ವಾದಿಗಳು ಅದೇ ಶೀರ್ಷಿಕೆಯಡಿಯಲ್ಲಿ ಅಥವಾ ಅದೇ ವ್ಯಕ್ತಿಯಡಿಯಲ್ಲಿ ಕ್ಲೇಮು ಮಾಡಲೇಬೇಕಾಗುತ್ತದೆಯೆಂದು ಅಭಿಪ್ರಾಯಪಟ್ಟಿರುವ ಅಧೀನ ನ್ಯಾಯಾಲಯವು, ಮೊದಲಿನ ದಾವೆಯಲ್ಲಿ ವಾದಿಯಾಗಿದ್ದ ಅವರ ಸಹೋದರನ ಮೂಲಕ ವಾದಿಗಳು ಕ್ಲೇಮು ಮಾಡದಿರುವುದರಿಂದ ಇದು ಅವರಿಗೆ ಬದ್ಧವಾಗಿರದೆ, ದೋಷಯುಕ್ತ ಪ್ರಸ್ತಾವವಾಗಿದೆ. ಇಬ್ಬರೂ ವಾದಿಗಳು ಎಂದರೆ ಈ ಮೊದಲಿನ ಹಾಗೂ ಈ ದಾವೆಯಲ್ಲಿರುವ ವಾದಿಗಳು ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರದಲ್ಲಿನ ಅಪ್ರಸ್ತುತ ಆಸ್ತಿಗೆ ಅವರ ಹಕ್ಕಿನ ಸುಳಿವನ್ನು ಶೋಧಿಸುತ್ತಿದ್ದರು.

ಆದುದರಿಂದ, ಸಾಮಾನ್ಯ ವ್ಯಾಜ್ಯ ಕಾರಣವು, ಮಲ್ಲಪ್ಪನು ಬರೆದುಕೊಟ್ಟ ಕ್ರಯಪತ್ರವನ್ನು ತಪ್ಪಿಸುವುದಾಗಿದೆ ಹಾಗೂ ಆ ವಿವಾದವು ಅಂತಿಮತೆಯನ್ನು ತಲುಪಿದ್ದು, ಅದನ್ನು ವಾದಿಸಲಾಗುವುದಿಲ್ಲ. ಆದುದರಿಂದ ದಾವೆಯನ್ನು, ಪೂರ್ವ ನ್ಯಾಯನಿರ್ಣಯದ ಮೂಲಕ ನಿಶ್ಚಿತವಾಗಿ ಪ್ರತಿಷೇಧಿಸಲಾಗಿತ್ತು.

ವಿಷಯದ ದೃಷ್ಟಿಕೋನದಲ್ಲಿ, ನಾವು, ಅಪೀಲನ್ನು ಪುರಸ್ಕರಿಸಿದ್ದೇವೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕಿರುತ್ತೇವೆ. ವೆಚ್ಚಗಳ ಬಗ್ಗೆ ಆದೇಶವಿರುವುದಿಲ್ಲ.

---